ಪಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ದಿಃ 05-02-2026**

<u>ಮುಂದುವರಿದ ಪಾಟೀ ಸವಾಲು</u> ಃ ಆರೋಪಿ ಪರಃ ಶ್ರೀಮತಿ ಎಸ್.ಟಿ.ಎ. ವಕೀಲರಿಂದಃ

ನನ್ನ ತಾಯಿಯ 7 ಎಕ್ರೆ ಜಾಗವನ್ನು 2018 ಏಪ್ರಿಲ್ ನಲ್ಲಿ ಮಾರಾಟ ಮಾಡಿರುತ್ತೇನೆ. ನನ್ನ ತಾಯಿಯವರಿಗೆ 5 ಜನ ಮಕ್ಕಳು. 4 ಗಂಡು ಹಾಗೂ 1 ಹೆಣ್ಣು. ಜಾಗ ಮಾರಾಟದಿಂದ ಬಂದ ಹಣ ಎಲ್ಲರಿಗೂ ಪಾಲಾಗಿರುತ್ತದೆ. ನಾನು 2 ಎಕ್ರೆ ಜಾಗದಲ್ಲಿ ಅಡಿಕೆ ಕೃಷಿ ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಬಹುದು. ಒಳ್ಳೆ ಅಡಿಕೆ ಬೆಳೆ ಬರಲು ವಾರ್ಷಿಕ 1-1.50 ಲಕ್ಷ

ಖರ್ಚು ಮಾಡಬೇಕಾಗುತ್ತದೆ. 2018 ರಲ್ಲಿ ನಮ್ಮ ಮನೆಯಲ್ಲಿ 4 ಜನ ಇದ್ದೆವು. ಮನೆಯ ಎಲ್ಲಾ ಖರ್ಚು ಕೃಷಿ ಆದಾಯದಿಂದ ನಡೆಯಬೇಕಿತ್ತು.

2010 ರಲ್ಲಿ ಆರೋಪಿಯನ್ನು ಯುವರಾಜ್ ಶೆಟ್ಟಿರವರು ನನಗೆ ಪರಿಚಯಮಾಡಿಕೊಟ್ಟಿರುತಾರೆ. ಸದ್ರಿ ಯುವರಾಜ್ ಶೆಟ್ಟಿಯವರನ್ನು ನನ್ನ ಪರ ವಾಗಿ ನ್ಯಾಯಾಲಯದಲ್ಲಿ ಹಾಜರುಪಡಿಸಬಹುದು. ಆರೋಪಿಗೆ ಯಾವ ಬ್ಯಾಂಕಿನಲ್ಲಿ ಎಷ್ಟು ಸಾಲ ಇತ್ತು ಎಂದು ಕೇಳಿ ತಿಳಿದುಕೊಂಡಿರುವುದಿಲ್ಲ. ರೂ. 4,00,000/- ಹಣ ದೊಡ್ಡ ಮೊತ್ತ. ಆರೋಪಿಗೆ ಹಣ ನೀಡುವಾಗ ಯಾವುದೇ ಕರಾರು ಮಾಡಿಕೊಂಡಿರುವುದಿಲ್ಲ. 2018 ಜೂನ್ ನಲ್ಲಿ ಆರೋಪಿ ನಿಪಿ-1 ಚೆಕ್ಕನ್ನು ತಂದುಕೊಟ್ಟಿರುತ್ತಾರೆ. ದಿನಾಂಕ ಹೇಳಲು ಬರುವುದಿಲ್ಲ. ಈ ಬಗ್ಗೆ ಪಿರ್ಯಾದಿ ಹಾಗೂ ಮುಖ್ಯ ವಿಚಾರಣೆ, ನೋಟೀಸಿನಲ್ಲಿ ಹೇಳಿರುತ್ತೀರಾ ಎಂದರೆ ನನ್ನ ವಕೀಲರ ಬಳಿ ಹೇಳಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಹಾಗೂ ಪಿರ್ಯಾದಿಯನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಆರೋಪಿ ನನಗೆ ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

2017-2018 ರಲ್ಲಿ ನಾನು ಪ್ರಸನ್ನರವರೊಂದಿಗೆ ಹಣ ವ್ಯವಹಾರ ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಭದ್ರತೆಗಾಗಿ ನಿಪಿ-1 ಚೆಕ್ಕನ್ನು ಪ್ರಸನ್ನ ರವರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಹಾಗೂ ಪ್ರಸನ್ನ ರವರಿಗೆ ಹಣದ ವ್ಯವಹಾರ ಇದ್ದುದರಿಂದ ನಿಪಿ-1 ಚೆಕ್ಕನ್ನು ನಾನು ಹಾಗೂ ಪ್ರಸನ್ನ ರವರು ದುರುಪಯೋಗಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕು ಬೇರೆ ಬೇರೆ ಶಾಹಿಯಲ್ಲಿ ಬರೆದಿರುತ್ತಾರೆ ಎಂದರೆ ಗೊತ್ತಾಗುತ್ತಿಲ್ಲ. ಆರೋಪಿ ಪ್ರಸನ್ನ ರವರಿಗೆ ನೀಡಿದಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕಿನಲ್ಲಿ ನಮೂದಿಸಿದ ಮೊತ್ತ ನೀಡಲು ನನಗೆ ಆರ್ಥಿಕ ಸಾಮರ್ಥ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ

ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ